**ಮಾವುತರುಗಳನ್ನು ಖಾಯಂಗೊಳಿಸುವುದು**

**39 (102)**

**ಡಾ : ಹೆಚ್.ಸಿ.ಮಹಾದೇವಪ್ಪ (ಟಿ.ನರಸೀಪುರ)**

ಅ) ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ (ಆನೆಗಳನ್ನು ನೋಡಿಕೊಳ್ಳುವ) ಮಾವುತರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಅವರುಗಳನ್ನು ಯಾವಾಗ ಖಾಯಂಗೊಳಿಸ ಲಾಗುವುದು?

ಇ) ಅರಣ್ಯಗಳಲ್ಲಿರುವ ಕೆರೆಗಳಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಕೆರೆಗಳ ಹೂಳನ್ನು ತೆಗೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಸಿ.ಪಿ. ಯೋಗೇಶ್ವರ**
**(ಮಾನ್ಯ ಅರಣ್ಯ ಸಚಿವರು)**

ಅ) ಆನೆ ಮಾವುತರ ಹುದ್ದೆಯು ಖಾಯಂ ಹುದ್ದೆಯಾಗಿದ್ದು, ಏಪ್ರಿಲ್ 2012ರ ಪರಿಷ್ಕೃತ ವೇತನ ಶ್ರೇಣಿಯಂತೆ ಆನೆ ಮಾವುತರ ಹುದ್ದೆಯ ವೇತನ ಶ್ರೇಣಿಯಂತೆ ಆನೆ ಮಾವುತರ ಹುದ್ದೆಯ ವೇತನ ಶ್ರೇಣಿ ರೂ. 10400–200–12000–250–13000–300–14200–350–15600–400–16400 ಯನ್ನು ಹೊಂದಿದ್ದು, ಖಾಯಂಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹೌದು

ಇ) ರಕ್ಷಿತ ಹಾಗೂ ಇನ್ನುಳಿದ ಅರಣ್ಯ ಪ್ರದೇಶಗಳಲ್ಲಿನ ಕೆರೆಗಳ ಹೂಳೆತ್ತುವ ಕಾರ್ಯವು ಇತರೆ ಕಾಮಗಾರಿಗಳಂತೆ ಅದು ಒಂದು ಕಾಮಗಾರಿಯಾಗಿದ್ದು, ಪ್ರತಿವರ್ಷ ಈ ಕಾಮಗಾರಿಯನ್ನು ಸತತವಾಗಿ ನಿರ್ವಹಿಸುತ್ತಾ ಬರುತ್ತಿದೆ. ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಕ್ಷೇತ್ರ ತಪಾಸಣೆಯನ್ನು ಆಗಿಂದಾಗ್ಗೆ ಕೈಗೊಳ್ಳುತ್ತಿದ್ದು, ಸದರಿ ಸಮಯದಲ್ಲಿ ಕೆರೆಗಳಲ್ಲಿ ಹೂಳು ತುಂಬಿರುವುದನ್ನು ಪರಿಶೀಲಿಸಿ, ತ್ವರಿತವಾಗಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

**ಡಾ: ಹೆಚ್.ಸಿ.ಮಹದೇವಪ್ಪ** : ಮಾನ್ಯ ಅಧ್ಯಕ್ಷರೆ, ಮಾವುತರ ಹುದ್ದೆಯು ತುಂಬಾ ಕಷ್ಟಕರವಾದಂತಹ ಹುದ್ದೆಯಾಗಿದೆ. ಎಷ್ಟೋ ಸಂದರ್ಭಗಳಲ್ಲಿ ಆನೆಯನ್ನು ಪಳಗಿಸುವಂತಹ ಮಾವುತರೆ ಸಾವಿಗೆ ಈಡಾಗುತ್ತಿದ್ದಾರೆ. ಅವರ ಮಕ್ಕಳ ಶಿಕ್ಷಣ, ಆರೋಗ್ಯಕ್ಕೂ ಕೂಡ ಒತ್ತನ್ನು ಕೊಡಬೇಕಾಗಿದೆ. ಅಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ. ಅರಣ್ಯ ಇಲಾಖೆಯಲ್ಲಿ ಇತರೆ ವರ್ಗಗಳ ಹುದ್ದೆಗಳು ಗಣನೀಯ ಪ್ರಮಾಣದಲ್ಲಿ ಖಾಲಿ ಇವೆ. ಅಂತಹ ಹುದ್ದೆಗಳನ್ನು ತಾವು ತುಂಬದೇ ಹೋದರೆ ಅರಣ್ಯ ಸಂಪತ್ತನ್ನು ಮತ್ತು ಅರಣ್ಯ ರಕ್ಷಣೆಯನ್ನು ಸಮರ್ಪಕವಾಗಿ ಮಾಡುವುದಕ್ಕಾಗುವುದಿಲ್ಲ. ಈಗ ಅಲ್ಲಿ ಪದೇಪದೇ ಕಾಡ್ಗಿಚ್ಚು, ಬಂಡೀಪುರ ಭಾಗದ ಕಡೆಯಲ್ಲಿ ಆಗಿ ಅಲ್ಲಿಯ ಅಧಿಕಾರಿಗಳ ಕೊರತೆಯಿಂದ, ನಿರ್ಲಕ್ಷ್ಯತೆಯಿಂದ ಬೇಜವಾಬ್ದಾರಿತನದಿಂದ ಅರಣ್ಯ ಕೂಡ loss ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವುದು ಹಾಗೂ ಹಾಲಿ ಕೆಲಸಮಾಡುತ್ತಿರುವವರನ್ನು ಖಾಯಂ ಮಾಡುವ ವಿಚಾರದಲ್ಲಿ ಗಮನ ಹರಿಸಬೇಕಾಗಿದೆ. ಅನೇಕ ಹುದ್ದೆಗಳು ಇವೆ. ಆ ಹುದ್ದೆಗಳನ್ನು ತುಂಬಬೇಕು. ಇದರ ಜೊತೆಗೆ ಮಾವುತರಲ್ಲಿ ಬೇರೆ ಬೇರೆ ಹುದ್ದೆಗಳು, ಅರಣ್ಯ ಸಂರಕ್ಷಕರ ಹುದ್ದೆಗಳು ತುಂಬಾ ಪ್ರಮಾಣದಲ್ಲಿ ಖಾಲಿ ಇವೆ. ಈಗ ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ 21% ಅರಣ್ಯ ಇರಬೇಕು. ಈಗ ಅಷ್ಟು ಅರಣ್ಯವಿಲ್ಲ, ಅದನ್ನು ಪಾಲನೆ ಮಾಡುವುದಕ್ಕಾಗುತ್ತಿಲ್ಲ. ಅಲ್ಲಿ ಅರಣ್ಯವನ್ನು ಬೆಳೆಸುವುದಕ್ಕಾಗುತ್ತಿಲ್ಲ. ಅರಣ್ಯವನ್ನು ಸಂರಕ್ಷಣೆ ಮಾಡುವುದಕ್ಕಾಗುತ್ತಿಲ್ಲ. ಅರಣ್ಯದಿಂದ ಪ್ರಾಣಿಗಳು ಊರಿಗೆ ಏತಕ್ಕಾಗಿ ಬರುತ್ತಿವೆ ಅಂದರೆ ಅವುಗಳಿಗೆ ಏನೂ ಸವಲತ್ತುಗಳು ಅಲ್ಲಿ ಸಿಗುತ್ತಿಲ್ಲ, ಅವಕ್ಕೆ ನೀರೂ ಸಹ ಸಿಗುತ್ತಿಲ್ಲ. ಅಲ್ಲಿ ಸರಿಯಾದಂತಹ Geographical area ಇಲ್ಲ. ಮಾನ್ಯ ಅಧ್ಯಕ್ಷರೆ, ನನಗಿಂತ ಹೆಚ್ಚಾಗಿ ತಮಗೂ ಕೂಡ ಗೊತ್ತಿದೆ. ನಾವು ಆ ಪಕ್ಕದಲ್ಲಿರುವುದರಿಂದ ಮಾನ್ಯ ಅರಣ್ಯ ಸಚಿವರು ಇದಕ್ಕೆಲ್ಲಾ ಸಮರ್ಪಕವಾದಂತಹ ಉತ್ತರವನ್ನು ಒದಗಿಸಲಿ ಎಂದು ಹೇಳಿರುವುದರಿಂದ ನನಗೂ ಅದೇ ಅನ್ವಯಿಸುತ್ತದೆ ಎಂದು ತಿಳಿದುಕೊಂಡಿದ್ದೇನೆ. ಅದರೂ ಕೂಡ ಅರಣ್ಯವನ್ನು ಸಂರಕ್ಷಣೆ ಮಾಡಿ ಮತ್ತು ಕೆರೆಗಳಿಂದ ಹೂಳೆತ್ತಿ ಪ್ರಾಣಿಗಳಿಗೆ ಬೇಕಾದಂತಹ ನೀರನ್ನು ಒದಗಿಸಬೇಕು.

**ಅಧ್ಯಕ್ಷರು:** ಮಾನ್ಯ ಮಹದೇವಪ್ಪನವರೆ, ಮಾನ್ಯ ಸಚಿವರು ಉತ್ತರವನ್ನು ಹೇಳಲಿ ಆಮೇಲೆ ತಾವು clarification ಕೇಳಿ.

**ಶ್ರೀ ಸಿ.ಪಿ.ಯೋಗೇಶ್ವರ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾವುತರಿಗೆ ಸಂಬಂಧಪಟ್ಟಂತೆ ಕೇಳಿದಂತಹ ನೇರವಾದ ಪ್ರಶ್ನೆಗೆ ಹೇಳುವುದಾದರೆ, ನಮ್ಮಲ್ಲಿ ಇರುವಂತಹ ಆನೆಗಳ ಸಂಖ್ಯೆ 110. ಒಂದು ಆನೆಗೆ ನಾವು ಒಬ್ಬ ಮಾವುತ ಮತ್ತೊಬ್ಬ ಕವಾಡಿ ಎಂದು ಇಬ್ಬರನ್ನು ನೇಮಕ ಮಾಡುತ್ತೇವೆ. ಈಗಾಲೇ ಅದಕ್ಕೆ ಸಂಬಂಧಪಟ್ಟಂತೆ 12 ಹುದ್ದೆಗಳು ಖಾಲಿ ಇವೆ. ನೂರಾರು ವರ್ಷಗಳಿಂದ ಯಾವ ಜನಾಂಗದವರು ಇದನ್ನು ನೋಡಿಕೊಂಡು ಬರುತ್ತಿದ್ದಾರೆ. ಅವರನೇ ನಾವು ನೇಮಕ ಮಾಡಬೆಕಾಗಿರುವುದರಿಂದ ಈಗ ಖಾಲಿ ಇರುವ 12 ಹುದ್ದೆಗಳನ್ನು ಆದಷ್ಟು ಬೇಗನೆ ಭರ್ತಿ ಮಾಡುತ್ತೇವೆ. ಅಲ್ಲಿ ಯಾವುದೇ ಹುದ್ದೆಗಳ ಕೊರತೆ ಇಲ್ಲ. ಇಲಾಖೆಯಲ್ಲಿ ಖಾಲಿ ಇರುವ ಇನ್ನಿತರ staff ಗಳ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಈ ಬಗ್ಗೆ ತಮಗೆ ಗೊತ್ತಿದೆ. ಸರ್ಕಾರವು ಕಳೆದೆರಡು ವರ್ಷಗಳಿಂದ ಸಾಕಷ್ಟು ಹುದ್ದೆಯನ್ನು ಭರ್ತಿ ಮಾಡಿದೆ. ಅದರಲ್ಲಿ ಕೆಲವೊಂದು ಹೊಸದಾಗಿ ಹುದ್ದೆಗಳನ್ನೂ ಸಹ ಕರೆದಿದ್ದೇವೆ. ಆದಷ್ಟು ಬೇಗನೆ ಅರಣ್ಯ ಇಲಾಖೆಗೆ ಪ್ರಮುಖವಾಗಿ ಬೇಕಾಗಿರುವಂತಹ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

**ಡಾ: ಹೆಚ್.ಸಿ.ಮಹದೇವಪ್ಪ** : RFOಗಳಿಂದ ಕೆಳಪಟ್ಟಿರುವಂತಹ ಹುದ್ದೆಗಳನ್ನು ಸಹ ಕೂಡಲೆ ನೇಮಕ ಮಾಡದೆ ಇದ್ದರೆ ಅರಣ್ಯ ಪಾಲನೆ ಕೆಲಸ ಸಮರ್ಪಕವಾಗಿ ಮಾಡುವುದಕ್ಕೆ ಆಗುವುದಿಲ್ಲ. ಅರಣ್ಯ ಸಿಬ್ಬಂದಿಗಳು ಇಲ್ಲದೆ ಅಲ್ಲಿ contract basis ಮೇಲೆ ಕೆಲಸ ಮಾಡುತ್ತಿರುವಂತಹವರು ಬೇಜವಾಬ್ದಾರಿಯಿಂದ ಅವರವರ jealousy ಯಿಂದ ಅವರೇ ಕಾಡ್ಗಿಚ್ಚನ್ನು ಹಬ್ಬಿಸಿ ಅರಣ್ಯ ನಾಶಕ್ಕೆ ಕಾರಣೀಭೂತರಗಿರುತ್ತಾರೆ. ಅಲ್ಲಿನ ಮೇಲಾಧಿಕಾರಿಗಳಿಗೆ ಗೊತ್ತೋ ಗೊತ್ತಿಲ್ಲದೆಯೋ ಸುಮ್ಮನೆ ಇರುತ್ತಾರೆ. ಅರಣ್ಯವು ನಾಶವಾದ ಮೇಲೆ ಪುನಃ ಅರಣ್ಯವನ್ನು ಬೆಳೆಸುವುದು ಕಷ್ಟಕರವಾದಂತಹ ಕೆಲಸವಾಗುತ್ತದೆ. ಅರಣ್ಯವನ್ನು ಸಂರಕ್ಷಣೆ ಮಾಡುವುದಕ್ಕೆ ಸಿಬ್ಬಂದಿಯ ಕೊರತೆಯು ತುಂಬಾ ಇದೆ. ಕೂಡಲೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಅಧ್ಯಕ್ಷರು :** ಮಾನ್ಯ ಶಂಕರಲಿಂಗೇಗೌಡರೆ ತಾವು ಮಾತನಾಡಿ.

**ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ :** ಮಾನ್ಯ ಅಧ್ಯಕ್ಷರೆ, ಮಾವುತರೂ ಕೂಡ ಮಾನವರೆ. ಅವರನ್ನು ಖಾಯಂ ಮಾಡಿದ್ದಾರೆ ಎಂದು ಉತ್ತರ ಇದೆ.

**ಅಧ್ಯಕ್ಷರು :** ಮಾನ್ಯ ಸಚಿವರು, ಅವರನ್ನು ಖಾಯಂ ಮಡಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ :** ಇದೆ ಅವರು ಬರಿ ಬಾಯಿ ಮಾತಿನಲ್ಲಿ ಹೇಳಿದ್ದಾರೆ. ಬರಿ ಮಾತಿನಲ್ಲಿದೆ ಅಷ್ಟೆ ಬಾಯಿ ತುಂಬಾ ಅಪರಂಜಿ ಎಂದಂತೆ ಆಗುತ್ತದೆ. ಆದರೆ ಏನೂ ಕೂಡ ಆಗುವುದಿಲ್ಲ. ಇವರು ಏನೇ ಹೇಳಿದರೂ ಕೂಡ ಅದನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಇವತ್ತು ಅನೆಗಳು ಕೂಡ ಮೈಸೂರಿಗೆ ನುಗ್ಗುತ್ತಿದೆ. ಎಲ್ಲಾ ಪ್ರಾಣಿಗಳು ಮತ್ತು ನಾಯಿ, ನರಿಗಳು ನುಗ್ಗುತ್ತಿದೆ. ನಾಳೆ ದಿನ ಮನುಷ್ಯರನ್ನು ತಿನ್ನುವಂತಹ ಕಾಲ ಬರುತ್ತದೆ. ಆದ್ದರಿಂದ ಅರಣ್ಯವನ್ನು ಸಂರಕ್ಷಣೆ ಮಾಡುವಂತಹ ಕೆಲಸವನ್ನು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

**ಶ್ರೀ ಸಿ.ಪಿ.ಯೋಗೇಶ್ವರ :** ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳಲ್ಲಿ ಮಾನ್ಯ ಸದಸ್ಯರದ ಶ್ರೀ ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡರು ಹೇಳಿದ ಹಾಗೆ ಬೇಕಾದಷ್ಟು ಹುದ್ದೆ ಖಾಲಿ ಇದ್ದರೂ ಎಲ್ಲವನ್ನು fill up ಮಾಡಿದ್ದೇವೆ. ಈಗ 12 ಹುದ್ದೆಗಳು ಮಾತ್ರ ಖಾಲಿ ಇವೆ. ಅದನ್ನೂ ಕೂಡ ಈ ವರ್ಷ fill up ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ: 40 (326)

ಶ್ರೀ ಎಂ.ಟಿ. ಕೃಷ್ಣಪ್ಪ :

(ಮಾನ್ಯ ಸದಸ್ಯರು ಗೈರುಹಾಜರಿದ್ದರು)